# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 510(606) |
| 2. | ಸದಸ್ಯರ ಹೆಸರು | : | ಶ್ರೀ ಶಾಂತರಾಮ್ ಬುಡ್ನ ಸಿದ್ದಿ(ನಾಮನಿರ್ದೇಶನ ಹೊಂದಿದವರು) |
| 3. | ಉತ್ತರಿಸುವ ದಿನಾಂಕ | : | 14/08/2025 |
| 4. | ಉತ್ತರಿಸುವ ಸಚಿವರು | : | ಸನ್ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟು ಸಿದ್ದಿ ಸಮುದಾಯಕ್ಕೆ ಅನೇಕ ವರ್ಷಗಳಿಂದ ಅವರು ಸಾಗುವಳಿ ಮಾಡಿಕೊಂಡು ಬಂದಿರುವ ಅರಣ್ಯ ಪ್ರದೇಶದ ಜಾಗಕ್ಕೆ ಅರಣ್ಯ ಹಕ್ಕು ಕಾಯ್ದೆಯಡಿಯಲ್ಲಿ ಹಕ್ಕು ಪತ್ರ ನೀಡುವ ಪ್ರಕ್ರಿಯೆ ಸಮರ್ಪಕವಾಗಿ ಅಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ ಕಾರಣಗಳನ್ನು ತಿಳಿಸುವುದು ; | • ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ- 2006 (2007ರ2) ಮತ್ತು ನಿಯಮ - 2008 (ನಿಯಮಗಳ ತಿದ್ದುಪಡಿ 2012) ರಡಿ ಅರಣ್ಯ ಹಕ್ಕು ಕೋರಿ ಸ್ವೀಕೃತವಾಗಿರುವ ಅರ್ಜಿಗಳ ವಿಲೇವಾರಿಯು ಗ್ರಾಮ ಅರಣ್ಯ ಹಕ್ಕು ಸಮಿತಿ/ಗ್ರಾಮ ಸಭೆ, ಉಪ ವಿಭಾಗ ಮಟ್ಟದ ಸಮಿತಿ (SDLC) ಮತ್ತು ಜಿಲ್ಲಾ ಮಟ್ಟದ ಸಮಿತಿ (DLC)ಗಳ ಜವಾಬ್ದಾರಿಯಾಗಿರುತ್ತದೆ.<br><br>• ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಹಕ್ಕು ಕಾಯ್ದೆಯಡಿ ಪರಿಶಿಷ್ಟ ಪಂಗಡದ ಸಿದ್ದಿ ಸಮುದಾಯದವರಿಂದ ಒಟ್ಟು 1527 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು ಸದರಿ ಅರ್ಜಿಗಳಲ್ಲಿ 954 ಅರ್ಜಿದಾರರಿಗೆ ಮಾನ್ಯ ಮಾಡಿ ಹಕ್ಕು ಪತ್ರ ನೀಡಲಾಗಿದೆ. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಮಧ್ಯಂತರ ಆದೇಶದಂತೆ 573 ತಿರಸ್ಕೃತ ಅರ್ಜಿಗಳ ಪುನರ್ ಪರಿಶೀಲನೆ ಕಾರ್ಯವನ್ನು ಜಿಲ್ಲಾ ಹಂತದಲ್ಲಿ ಅರಣ್ಯ ಹಕ್ಕು ಸಮಿತಿಗಳ ಮೂಲಕ ಕೈಗೊಳ್ಳಲಾಗುತ್ತಿದ್ದು, ಸದರಿ ಪ್ರಕ್ರಿಯೆ ಪ್ರಗತಿಯಲ್ಲಿದೆ. |
| ಆ) | ಬುಡಕಟ್ಟು ಸಿದ್ದಿ ಸಮುದಾಯವು ಉಳುಮೆ ಮಾಡಿಕೊಂಡು ಬಂದ ಭೂಮಿಗೆ ಅರಣ್ಯ ಹಕ್ಕು ಕಾಯ್ದೆಯಡಿಯಲ್ಲಿ ಸರಿಯಾದ ದಾಖಲೆಗಳನ್ನು ನೀಡಿದರೂ ಕೆಲವೇ ಗುಂಟೆ. ಜಾಗ ನೀಡುತ್ತಿದ್ದು ಇದನ್ನು ಕ್ರಮಬದ್ಧವಾಗಿ ನೀಡುವಂತೆ ಸರ್ಕಾರ ತೆಗೆದುಕೊಳ್ಳುವ ಕ್ರಮಗಳಾವುವು? (ಮಾಹಿತಿ ನೀಡುವುದು) | • ಅರಣ್ಯ ಹಕ್ಕು ಕಾಯ್ದೆಯಡಿ ಅರಣ್ಯ ಹಕ್ಕು ಕೋರಿ ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಲು ಗ್ರಾಮ ಅರಣ್ಯ ಹಕ್ಕು ಸಮಿತಿ ವತಿಯಿಂದ ಸ್ಥಳ ಪರಿಶೀಲನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಅರ್ಜಿದಾರರು ತೋರಿಸಿದ ಅನುಭೋಗದ ನಿವೇಶನ/ಜಮೀನಿನ ವಿಸ್ತೀರ್ಣಕ್ಕೆ ಅನುಗುಣವಾಗಿ ನಕ್ಷೆಯನ್ನು ತಯಾರಿಸಿ, |

| | | |
|---|---|---|
| | | ಗ್ರಾಮ ಅರಣ್ಯ ಹಕ್ಕು ಸಮಿತಿಯು ಸಲ್ಲಿಸಿದ ವರದಿ/ದಾಖಲೆಗಳನ್ನು ಜಿಲ್ಲಾ ಮಟ್ಟದ ಅರಣ್ಯ ಹಕ್ಕು ಸಮಿತಿಯಲ್ಲಿ ಪರಿಶೀಲಿಸಿ ಅನುಭೋಗದ ನಿವೇಶನ/ಜಮೀನನ್ನು ಮಂಜೂರು ಮಾಡಲಾಗುತ್ತದೆ..<br>• ಅರಣ್ಯ ಹಕ್ಕು ಕಾಯ್ದೆ ಅನುಷ್ಠಾನ ಕುರಿತಂತೆ ರಾಜ್ಯ ಮಟ್ಟದ ಸಮಿತಿಯಿಂದ ಜಿಲ್ಲಾ ಸಮಿತಿಗಳಿಗೆ ಸ್ಪಷ್ಟೀಕರಣಗಳನ್ನು ಕಾಲ ಕಾಲಕ್ಕೆ ನೀಡಲಾಗಿದೆ. (ವಿವರಗಳನ್ನು ಅನುಬಂಧದಲ್ಲಿ ನೀಡಿದೆ). |

**STW/SECA/TSP/34/2025**

(ಸಿದ್ದರಾಮಯ್ಯ)
**ಮುಖ್ಯಮಂತ್ರಿ**

# ಅನುಬಂಧ

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಾಂತರಾಮ್ ಬುಡ್ನ ಸಿದ್ದಿ (ನಾಮ ನಿರ್ದೇಶನ ಹೊಂದಿದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:510 (606)

| ಕ್ರ. ಸಂ. | ದಿನಾಂಕ | ಲಗತ್ತುಗಳು |
|---|---|---|
| 1 | 04-07-2025 | ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಅರಣ್ಯ ಹಕ್ಕು ಕಾಯ್ದೆಯ ಅನುಷ್ಠಾನದಲ್ಲಿರುವ ಪ್ರಕ್ರಿಯೆಯಲ್ಲಿನ ಗೊಂದಲಗಳನ್ನು ಬಗೆಹರಿಸುವ ಕುರಿತ ಸಭೆಯ ನಡವಳಿ |
| 2 | 14-03-2025 | ಅರಣ್ಯ ಹಕ್ಕು ಕಾಯ್ದೆಯ ಅನುಷ್ಠಾನದ ಕುರಿತು ಹೊರಡಿಸಿದ ಸುತ್ತೋಲೆ |
| 3 | 28-11-2024 | ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಮೇಲುಸ್ತುವಾರಿ ಸಮಿತಿ ಸಭೆಯ ನಡವಳಿ |
| 4 | 22-04-2019 | ಅರಣ್ಯ ಹಕ್ಕು ಕಾಯ್ದೆಯ ಅನುಷ್ಠಾನದ ಕುರಿತು ಹೊರಡಿಸಿದ ಸುತ್ತೋಲೆ |

ಸರ್ಕಾರ ಮತ್ತು ರಾಜ್ಯ ಸರ್ಕಾರದ ಮನವಿ ಮೇಲೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ 28-02-2019 ರಂದು ಮಧ್ಯಂತರ ತೀರ್ಪಿನಲ್ಲಿ, ದಿನಾಂಕ 13-02-2019ರ ಆದೇಶವನ್ನು **ತಡೆಹಿಡಿಯಲಾಗಿದೆ.**

**ಸರ್ವೋಚ್ಚ ನ್ಯಾಯಾಲಯದ ದಿನಾಂಕ:28.02.2019ರ ಆದೇಶದ ಉದ್ಧೃತ ಭಾಗ ಈ ಕೆಳಕಂಡಂತಿದೆ**

1. Let the State Government also clarify what is the process to be followed for eviction after rejection orders have been passed
2. In the facts and circumstances of the case, we direct the chief secretaries of various State Government to file detailed affidavits covering all the aforesaid aspects and also place on record the rejection orders and the details of the procedure followed for settlement of claims and what are the main ground on which the claims have been rejected. It may also be stated that whether the Tribals were given opportunity to adduce evidence and, if yes, to what extent and whether reasoned orders have been passed regarding rejection of the claims.

**ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 06/03/2019 ರಂದು ನಡೆದ ಸಭೆಯ ನಡವಳಿಯ ಉದ್ಧೃತ ಭಾಗ ಈ ಕೆಳಕಂಡಂತಿದೆ.**

In view of the limited time available for filing affidavit before the the Supreme Court, states may undertake Suo-moto review of rejected cases as a more efficient method of ensuring justice to genuine claimants rather than waiting for or expecting all claimants whose cases have been rejected to appeal a petition. This is especially relevant when rejection along with reasons thereof, have not been conveyed to the claimants, in writing. However, the timeline given by Hon'ble Supreme Court has to be adhered to.

ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ, ಅರಣ್ಯ ಹಕ್ಕು ಕಾಯ್ದೆಯಡಿಯಲ್ಲಿ ಈಗಾಗಲೇ ತಿರಸ್ಕಾರಗೊಂಡಿರುವ ಅರ್ಜಿಗಳನ್ನು ಪುನರ್ ಪರಿಶೀಲಿಸಲು ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆಯಲಾಗಿದೆ. ಕಾನೂನು ಇಲಾಖೆ ಅಭಿಪ್ರಾಯ ಈ ಕೆಳಕಂಡಂತೆ ಇರುತ್ತದೆ.

**(ಅ) ಅರಣ್ಯ ಹಕ್ಕು ಸಮಿತಿಗಳು ನೈಸರ್ಗಿಕ ನ್ಯಾಯ ನಿಯಮಗಳನ್ನು ಪಾಲಿಸದೇ ಅರ್ಜಿಗಳನ್ನು ತಿರಸ್ಕರಿಸಿದಲ್ಲಿ ಪುನ: ನೈಸರ್ಗಿಕ ನ್ಯಾಯ ನಿಯಮಗಳನ್ವಯವೇ ಅಂತಹ ಅರ್ಜಿಗಳನ್ನು ಪುನ: ಪುನರ್ ಪರಿಶೀಲಿಸಿ ಸೂಕ್ತ ಆದೇಶಗಳನ್ನು ಹೊರಡಿಸಲು ಯಾವುದೇ ಬಾಧಕವಿರುವುದಿಲ್ಲ.**

(ಆ) ಅರಣ್ಯ ಹಕ್ಕು ಕಾಯ್ದೆ 2006 ಯಲ್ಲಾಗಲೀ ಅಥವಾ ಈ ಕುರಿತು ರಚಿಸಲಾದ ನಿಯಮಗಳಲ್ಲಾಗಲೀ ಸಂಬಂಧಿತ ಸಮಿತಿಗಳ ನಿರ್ಣಯಗಳು ಸರ್ವಾನುಮತದ ನಿರ್ಣಯಗಳಾಗಿರಬೇಕೆಂದು ಉಲ್ಲೇಖಿಸಿರುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಈ ಸಮಿತಿಗಳ ಬಹುಮತದ ನಿರ್ಣಯಗಳೂ ಸಹ ಸಿಂಧುತ್ವ ಹೊಂದಿರುತ್ತವೆ. (ಪ್ರತಿ ಲಗತ್ತಿಸಿದೆ).

ಭಾರತ ಸರ್ಕಾರದ ಪತ್ರ ದಿನಾಂಕ 16-06-2017, 29-06-2018 ಮತ್ತು ಕೇಂದ್ರ ಸರ್ಕಾರದ ಕಾರ್ಯದರ್ಶಿಗಳ ಸಮ್ಮುಖದಲ್ಲಿ ದಿನಾಂಕ 06-03-2019 ರಂದು ನಡೆದ ಸಭೆಯ ನಡವಳಿ ಪ್ರತಿಗಳನ್ನು ಜಿಲ್ಲಾಡಳಿತದ ಮಾಹಿತಿಗಾಗಿ ಲಗತ್ತಿಸಲಾಗಿದೆ

ಈಗಾಗಲೇ ರಾಜ್ಯ ಸರ್ಕಾರದ ಆದೇಶ ಸಂಖ್ಯೆ:ಸಕಇ 439 ಪವಯೋ 2015 (ಭಾಗ-1) ದಿನಾಂಕ:07-03-2017 ರಲ್ಲಿ ಸದರಿ ವಿಷಯದಲ್ಲಿ ಸ್ಪಷ್ಟೀಕರಣ ಸಹ ನೀಡಲಾಗಿದೆ.

ಆದ್ದರಿಂದ ತಿರಸ್ಕರಿಸಿರುವ ಎಲ್ಲಾ ಅರ್ಜಿಗಳನ್ನು, ತಿರಸ್ಕರಿಸಿದ ಸಮಿತಿಯೇ ಪುನರ್ ಪರಿಶೀಲನೆ ಮಾಡತಕ್ಕದ್ದು.

ಅರ್ಜಿಗಳ ವಿಲೇವಾರಿ ಕುರಿತು ಮೈಸೂರು ಜಿಲ್ಲೆ, ಉತ್ತರಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕು, ದಾವಣಗೆರೆ ಜಿಲ್ಲೆಯ ಚನ್ನಗಿರಿ, ಹೊನ್ನಾಳಿ ಹಾಗೂ ತುಮಕೂರು ಜಿಲ್ಲೆಯ ಶಿರ ತಾಲ್ಲೂಕಿನಲ್ಲಿ ಅರಣ್ಯ ಹಕ್ಕು ಕಾಯ್ದೆಯ ಅನುಷ್ಠಾನದಲ್ಲಿ ಅನುಸರಿಸಿರುವ ಪ್ರಕ್ರಿಯೆಗಳ ಕುರಿತು ದಿನಾಂಕ 15-03-2019 ಮತ್ತು 23-03-2019ರಂದು ದಾಖಲೆಗಳನ್ನು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಕೇಂದ್ರ ಕಚೇರಿಯಿಂದ ಪರಿಶೀಲಿಸಲಾಗಿದೆ. ಅದರಂತೆ ಅರಣ್ಯ ಹಕ್ಕು ಕಾಯ್ದೆಯ ಅನುಷ್ಠಾನದಲ್ಲಿ ಅನುಸರಿಸಿರುವ ಪ್ರಕ್ರಿಯೆಗಳ ಪರಿಶೀಲನೆಯಲ್ಲಿ ಈ ಕೆಳಕಂಡ ಅಂಶಗಳನ್ನು ಗಮನಿಸಲಾಗಿದೆ

1. ಅರ್ಜಿದಾರರು ಸಲ್ಲಿಸಿರುವ ಅರ್ಜಿಗಳಲ್ಲಿರುವ ಜಮೀನು ಕಂದಾಯ ಜಮೀನೇ ಅಥವಾ ಅರಣ್ಯ ಜಮೀನೇ ಎಂಬ ಬಗ್ಗೆ ದೃಢಿಕರಿಸಿಕೊಳ್ಳದೆ ಅರ್ಜಿಗಳನ್ನು ತಿರಸ್ಕರಿಸಲಾಗಿರುತ್ತದೆ.

2. ಅರ್ಜಿದಾರರಿಗೆ ವೈಯಕ್ತಿಕವಾಗಿ ಅಹವಾಲು ಸಲ್ಲಿಸಲು ಅವಕಾಶ ನೀಡಿರುವುದಿಲ್ಲ.

3. ಅರ್ಜಿದಾರರಿಗೆ ವೈಯಕ್ತಿಕವಾಗಿ ಕೆಲವು ಪ್ರಕರಣಗಳಲ್ಲಿ ಅರ್ಜಿಗಳು ತಿರಸ್ಕೃತವಾಗಿರುವ ಬಗ್ಗೆ ಹಿಂಬರಹ ನೀಡಿರುವುದಿಲ್ಲ.

4. ಕೆಲವು ಪ್ರಕರಣಗಳಲ್ಲಿ ಪಂಚನಾಮೆ, ಸ್ಥಳ ತನಿಖಾ ವರದಿಗಳನ್ನು ಗ್ರಾಮಸಭೆ ಅಥವಾ ಅರಣ್ಯ ಹಕ್ಕು ಸಮಿತಿಗಳಿಂದ ಪಡೆದಿರುವುದಿಲ್ಲ.

5. ಅರಣ್ಯ ಹಕ್ಕು ಸಮಿತಿಯು ಅರ್ಜಿಗಳನ್ನು ಪರಿಶೀಲಿಸಿದ ನಂತರ, ಅದರ ಆಧಾರದ ಮೇಲೆ ಗ್ರಾಮಸಭೆಗಳು ಬಹಳಷ್ಟು ಪ್ರಕರಣಗಳಲ್ಲಿ ಹಕ್ಕುಗಳನ್ನು ಮಾನ್ಯತೆ ಮಾಡಲು ಶಿಫಾರಸ್ಸು ಮಾಡಿರುತ್ತಾರೆ. ಆದರೆ, ಎಲ್ಲಾ ಅರ್ಜಿಗಳನ್ನು ಒಗ್ಗೂಡಿಸಿ ಉಪ ವಿಭಾಗ ಮಟ್ಟದ ಸಮಿತಿಯಲ್ಲಿ ಯಾವುದೇ ಸಕಾರಣಗಳನ್ನು ನೀಡದೇ ತಿರಸ್ಕರಿಸಲಾಗಿದೆ.

6. ಗ್ರಾಮಸಭೆ ಅಥವಾ ಅರಣ್ಯ ಹಕ್ಕು ಸಮಿತಿಗಳಿಗೆ ಅರ್ಜಿಗಳನ್ನು ಪರಿಶೀಲಿಸುವ ಪ್ರಕ್ರಿಯೆಗಳಲ್ಲಿ ಅಗತ್ಯವಾದ ದಾಖಲೆಗಳನ್ನು ಮತ್ತು ಮಾರ್ಗಸೂಚನೆಗಳನ್ನು ನಿಯಮ 6 ರಂತೆ ಉಪ ವಿಭಾಗ ಮಟ್ಟದ ಸಮಿತಿಯಿಂದ ಒದಗಿಸಿರುವುದಿಲ್ಲ

7. ಮುಖ್ಯವಾಗಿ ಬುಡಕಟ್ಟು ಜನರ ಅರ್ಜಿಗಳಲ್ಲಿ ಕಂಡುಬಂದಂತೆ ದಿನಾಂಕ 13-12-2005ರ ಮುಂಚೆ ಅರಣ್ಯ ಪ್ರದೇಶದ ಅನೆಕಂದಕದ ಹೊರಗಡೆ ನೆಲೆಸಿದ್ದು, ಸದರಿ ನೆಲೆಸಿರುವ ಪ್ರದೇಶವು ಅರಣ್ಯ ಪ್ರದೇಶವಾಗಿದ್ದರೂ ಸಹ ಸದರಿ ಜಮೀನಿಗೆ ಸಲ್ಲಿಸಿರುವ ಅರ್ಜಿಗಳನ್ನು ತಿರಸ್ಕರಿಸಲಾಗಿದೆ

8. ಬುಡಕಟ್ಟು ಜನರ ಕೆಲವು ಪ್ರಕರಣಗಳಲ್ಲಿ ಅರಣ್ಯ ಪ್ರದೇಶದಲ್ಲಿ ಮನೆಗಳನ್ನು ನಿರ್ಮಿಸಿಕೊಂಡು ಹಾಗೂ ಮರಗಳನ್ನು ಬೆಳೆಸಿದ್ದರೂ, ಅವುಗಳನ್ನು ಪರಿಗಣಿಸದೇ, ದಿನಾಂಕ 13-12-2005ರ ಮುಂಚೆ ನೆಲೆಸಿರುವುದಿಲ್ಲವೆಂದು ಅರ್ಜಿಗಳನ್ನು ತಿರಸ್ಕರಿಸಲಾಗಿದೆ

9 ಕೆಲವು ಪ್ರಕರಣಗಳಲ್ಲಿ ಕಂದಾಯ ಇಲಾಖೆಯು ಜಮೀನುಗಳನ್ನು ಅರಣ್ಯ ಭೂಮಿ ಎಂದು ಘೋಷಿಸುವ ಮುನ್ನ ಮಂಜೂರಾತಿ ಪತ್ರ ನೀಡಿದ್ದರೂ ಸಹ ಇದೇ ಜಮೀನಿಗೆ ಅರಣ್ಯ ಇಲಾಖೆಯು ಕರ್ನಾಟಕ ಅರಣ್ಯ ಅಧಿನಿಯಮ. 1963 ರ ಕಲಂ 64(ಎ) ರಡಿ ಜಮೀನು ತೆರವುಗೊಳಿಸಲು ನೋಟೀಸ್ ನೀಡಿರುತ್ತಾರೆ. ಆದರೆ, ಕಂದಾಯ ಇಲಾಖೆಯು ಅರಣ್ಯ ಭೂಮಿ ಎಂದು ಘೋಷಿಸುವ ಮುನ್ನವೇ ಮಂಜೂರಾತಿ ನೀಡಿದ್ದರೆ. ಅಂತಹ ಪ್ರಕರಣಗಳನ್ನು ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ 2006 (2007ರ 2) ರ ಅಧಿನಿಯಮ ಕಲಂ 2 (ಡಿ) ರಡಿ ಪರಿಗಣಿಸಬೇಕಾಗುವುದು. ಆದರೆ. ಇಂತಹ ಪ್ರಕರಣಗಳಲ್ಲಿ ಸಹ ಅರಣ್ಯ ಹಕ್ಕು ಕಾಯ್ದೆ, 2006 ರಡಿಯಲ್ಲಿ ಪರಿಗಣಿಸದಿರುವುದು ಕಂಡು ಬಂದಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ತಿರಸ್ಕರಿಸಿದ ಅರ್ಜಿಗಳನ್ನು ಪುನರ್ ಪರಿಶೀಲನೆ ಮಾಡುವ ಸಂದರ್ಭಗಳಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳು ಈ ಕೆಳಕಂಡಂತಿರುತ್ತವೆ

1 ಗ್ರಾಮಸಭೆ ಅಥವಾ ಅರಣ್ಯ ಹಕ್ಕು ಸಮಿತಿಗಳು ಅರ್ಜಿಗಳನ್ನು ಪುನರ್ ಪರಿಶೀಲಿಸುವ ಸಮಯದಲ್ಲಿ ಅರಣ್ಯ ಹಾಗೂ ಕಂದಾಯ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದು. ಅರ್ಜಿದಾರರ ಹಕ್ಕುಗಳ ಮತ್ತು ಪರಿಗಣಿಸಬಹುದಾದ ಸಾಕ್ಷ್ಯಗಳ ಬಗ್ಗೆ ಮಾರ್ಗದರ್ಶನ ನೀಡುವುದು.

2 ಅರ್ಜಿ ಸಲ್ಲಿಸಿದ ಜಮೀನು ಕಂದಾಯ ಇಲಾಖೆಗೆ ಸೇರಿದ ಸರ್ಕಾರದ ಜಮೀನೇ? ಅಥವಾ ಅರಣ್ಯ ಇಲಾಖೆಯಿಂದ ಅಧಿಸೂಚಿಸಲ್ಪಟ್ಟ ಜಮೀನೇ? ಎಂಬುದರ ಬಗ್ಗೆ ಪಹಣಿ ಪತ್ರ ಹಾಗೂ ಇನ್ನಿತರ ಸರ್ಕಾರಿ ದಾಖಲೆಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳತಕ್ಕದ್ದು. ಈ ಹಿಂದೆ 'ಸಿ' ಮತ್ತು 'ಡಿ' ವರ್ಗೀಕೃತ ಕಂದಾಯ ಜಮೀನುಗಳನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿದ್ದು. ಈ ಬಗ್ಗೆ ಪರಿಶೀಲಿಸಿ ಅರಣ್ಯ ಹಕ್ಕು ಕಾಯ್ದೆ ಕಲಂ 2(ಡಿ) ರಡಿ ಬರುತ್ತದೆ ಅಥವಾ ಇಲ್ಲವೇ ಎಂಬ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

3 ಅರ್ಜಿದಾರರಿಗೆ ವೈಯಕ್ತಿಕವಾಗಿ ಲಿಖಿತ ಮೂಲಕ ನೋಟೀಸ್ ನೀಡಿ ಅಹವಾಲು ಸಲ್ಲಿಸಲು ಅವಕಾಶ ಕಲ್ಪಿಸತಕ್ಕದ್ದು.

4 ಗ್ರಾಮ/ಹಾಡಿ ಮಟ್ಟದಲ್ಲಿ ಪಂಚನಾಮೆ. ಸ್ಥಳ ತನಿಖಾ ವರದಿ ಪಡೆದು ಮತ್ತು ಅವುಗಳನ್ನು ವೀಡಿಯೋ ಮೂಲಕ ಚಿತ್ರೀಕರಿಸಿ ದಾಖಲಿಸುವುದು

5 ಯಾವುದೇ ಕಾರಣಕ್ಕೂ ಎಲ್ಲಾ ಅರ್ಜಿಗಳನ್ನು ಒಗ್ಗೂಡಿಸಿ ಉಪವಿಭಾಗ ಮಟ್ಟದ ಸಮಿತಿಯಲ್ಲಿ ಸಕಾರಣವಿಲ್ಲದೇ ತಿರಸ್ಕರಿಸುವಂತಿಲ್ಲ ಹಾಗೂ ಅರ್ಜಿದಾರರಿಗೆ ಅಹವಾಲು ಸಲ್ಲಿಸಲು ಅವಕಾಶ ನೀಡಿ ಸಕಾರಣಗಳೊಂದಿಗೆ ಸೂಕ್ತ ಆದೇಶ ಹೊರಡಿಸತಕ್ಕದ್ದು.

6 ಗ್ರಾಮಸಭೆ/ ಉಪ ವಿಭಾಗ ಮಟ್ಟದ ಸಮಿತಿ/ಜಿಲ್ಲಾಮಟ್ಟದ ಸಮಿತಿಗಳು ಪುನರ್ ಪರಿಶೀಲಿಸಿದ ನಂತರ ಯಾವುದೇ ಅರ್ಜಿಯನ್ನು ಪುನಃ ತಿರಸ್ಕರಿಸಿದಲ್ಲಿ, ಕಾರಣಗಳೊಂದಿಗೆ ಅರ್ಜಿದಾರರಿಗೆ ಸೂಕ್ತ ಹಿಂಬರಹ/ಆದೇಶ ನೀಡತಕ್ಕದ್ದು. ಆದರೆ. ಸದರಿ ಹಿಂಬರಹ/ಆದೇಶದಲ್ಲಿ ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ. 2006 (2007ರ 2) ರ ಕಲಂ 6 (2) ರನ್ವಯ ಹಾಗೂ ನಿಯಮಗಳು. 2007 ರ ನಿಯಮ 14 (1) ಮತ್ತು 15 (1) ರಡಿಯಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ ಎಂಬುದರ ಬಗ್ಗೆ ತಿಳಿಸತಕ್ಕದ್ದು.

7. ಗ್ರಾಮಸಭೆಯ ಶಿಫಾರಸ್ಸುಗಳು ಅಪೂರ್ಣವಾಗಿವೆ ಎಂದು ಕಂಡು ಬಂದರೆ ಅಥವಾ ಈ ಪ್ರಕರಣಗಳು ಇನ್ನಷ್ಟು ಪರಿಶೀಲನೆಗೆ ಒಳಪಡಬೇಕಾದ ಅವಶ್ಯಕತೆ ಇದೆ ಎಂದು ಕಂಡುಬಂದಲ್ಲಿ ಯಾವ ಅರ್ಜಿಯನ್ನೂ ತಿರಸ್ಕರಿಸದೆ ಉಪವಿಭಾಗದ ಸಮಿತಿ ಅಥವಾ ಜಿಲ್ಲಾ ಮಟ್ಟದ ಸಮಿತಿಯು ಗ್ರಾಮ ಸಭೆಗೆ ಪುನರ್ ವಿಮರ್ಶೆಗಾಗಿ ಅರ್ಜಿಯನ್ನು ಕಳುಹಿಸಿಕೊಡುವುದು

8. ಗ್ರಾಮಸಭೆಯು ಮಾಡಿದ ನಿರ್ಣಯಗಳು ಅಥವಾ ಶಿಫಾರಸ್ಸುಗಳನ್ನು ತಿರಸ್ಕರಿಸುವ ಅಥವಾ ತಿದ್ದುಪಡಿ ಮಾಡುವ ಸಂದರ್ಭದಲ್ಲಿ ಉಪವಿಭಾಗ ಮಟ್ಟದ ಮತ್ತು ಜಿಲ್ಲಾ ಮಟ್ಟದ ಸಮಿತಿಗಳು ತೆಗೆದುಕೊಳ್ಳುವ ಎಲ್ಲ ಆದೇಶಗಳು ಸಕಾರಣಗಳೊಂದಿಗೆ ಸ್ವಯಂವೇದ್ಯ ಆದೇಶ ರೂಪದಲ್ಲಿರಬೇಕು.

9. ಅರಣ್ಯ ಹಕ್ಕು ಕಾಯ್ದೆ ನಿಯಮ 13 ರಲ್ಲಿ ಅರಣ್ಯ ಹಕ್ಕು ನೀಡುವ ಕುರಿತು ಬೇಕಾಗುವ ವಿವಿಧ ಸಾಕ್ಷ್ಯಗಳನ್ನು ಉಲ್ಲೇಖಿಸಲಾಗಿದೆ. ಅದರಲ್ಲಿ ಕನಿಷ್ಠ 2 ಸಾಕ್ಷ್ಯಗಳು ಲಭ್ಯವಿದ್ದಲ್ಲಿ ಅಂತಹ ಅರ್ಜಿಗಳಲ್ಲಿ ಅರಣ್ಯ ಹಕ್ಕು ನೀಡಲು ಪರಿಗಣಿಸುವುದು.

10. ಅರಣ್ಯ ಇಲಾಖೆಯು ಉಪಗ್ರಹದಿಂದ ಹಾಗೂ ಮತ್ತಿತರ ಆಧುನಿಕ ತಂತ್ರಜ್ಞಾನದ ನೆರವಿನಿಂದ ಪಡೆಯಲಾದ ಛಾಯಾಚಿತ್ರಗಳ ಸಾಕ್ಷ್ಯಗಳು ಅರ್ಜಿದಾರರು ಸಲ್ಲಿಸುವ ಸಾಕ್ಷ್ಯಾಧಾರಗಳಿಗೆ ಹೋಲಿಕೆ ಮಾಡಿ, ತೀರ್ಮಾನ ಕೈಗೊಳ್ಳಬಾರದು ಹಾಗೂ ಅರ್ಜಿದಾರರು ಸಲ್ಲಿಸಿರುವ ಸಾಕ್ಷ್ಯಾಧಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಹಾಗೂ ಇತರೆ ಎಲ್ಲಾ ಅಂಶಗಳನ್ನು ಒಟ್ಟಾರೆಯಾಗಿ ಪರಿಗಣಿಸಿ, ತೀರ್ಮಾನಿಸತಕ್ಕದ್ದು.

11. ಕೆಲವು ಪ್ರಕರಣಗಳಲ್ಲಿ ಕಂದಾಯ ಇಲಾಖೆಯಿಂದ ಮಂಜೂರಾತಿ ಪತ್ರ ನೀಡಿದ್ದರೂ ಸಹ ಅದೇ ಜಮೀನಿಗೆ ಅರಣ್ಯ ಇಲಾಖೆಯಿಂದ ಕರ್ನಾಟಕ ಅರಣ್ಯ ಅಧಿನಿಯಮ, 1963 ಕಲಂ 64(ಎ) ರಡಿ ಜಮೀನು ತೆರವುಗೊಳಿಸಲು ನೋಟೀಸ್ ನೀಡಿರುತ್ತಾರೆ. ಇಂತಹ ಪ್ರಕರಣಗಳಲ್ಲಿ ಅರ್ಜಿದಾರರು ಸಲ್ಲಿಸುವ ಜಮೀನು ಅರಣ್ಯ ಹಕ್ಕು ಕಾಯ್ದೆ 2006 ರ ಕಲಂ 2 (ಡಿ) ರಡಿ ಬರುವ ಅರಣ್ಯ ಜಮೀನು ಆದಲ್ಲಿ, ಅರ್ಜಿಗಳನ್ನು ಅರಣ್ಯ ಹಕ್ಕು ಕಾಯ್ದೆ 2006 ರಡಿ ಪರಿಶೀಲಿಸಿ ಪರಿಗಣಿಸುವುದು.

12. ಈ ಹಿಂದೆ ಅರಣ್ಯ ಇಲಾಖೆಯಿಂದ ಕರ್ನಾಟಕ ಅರಣ್ಯ ಅಧಿನಿಯಮ, 1963 ಹಾಗೂ ಅರಣ್ಯ ಸಂರಕ್ಷಣಾ ಕಾಯ್ದೆ, 1980 ರಡಿಯಲ್ಲಿ ನೋಟೀಸ್ ನೀಡಲಾದ ಪ್ರಕರಣಗಳಲ್ಲಿ ಅರಣ್ಯ ಹಕ್ಕು ಕಾಯ್ದೆ, 2006 ಮತ್ತು ನಿಯಮಗಳು, 2007 ರನ್ವಯ ಸೂಕ್ಷ್ಮವಾಗಿ ಪರಿಶೀಲಿಸಿ, ದಿನಾಂಕ: 13-12-2005 ರ ಮುಂಚಿನ ಅವಧಿಯನ್ನು ಲೆಕ್ಕಹಾಕಿ ಖಚಿತಪಡಿಸಿಕೊಳ್ಳುವುದು

13. ಅರಣ್ಯ ಹಕ್ಕು ಕಾಯ್ದೆ, 2006 ರ ಕಲಂ 4 ರನ್ವಯ ಮುಖ್ಯವಾಗಿ ಅಧಿಸೂಚಿತ ಅರಣ್ಯ ಪ್ರದೇಶದಲ್ಲಿರುವ ಅರಣ್ಯವಾಸಿಗಳ ಅರ್ಜಿಗಳ ಬಗ್ಗೆ ಹೆಚ್ಚಿನ ಗಮನಹರಿಸಿ, ನಿಯಮಾನುಸಾರ ಪುನ: ಪರಿಶೀಲಿಸಿ ಸೂಕ್ತ ಆದೇಶ ಮಾಡತಕ್ಕದ್ದು

14. ಅರ್ಜಿದಾರರು ಅರಣ್ಯ ಪ್ರದೇಶದಲ್ಲಿ ಮನೆಗಳನ್ನು ನಿರ್ಮಿಸಿಕೊಂಡು ವಾಸವಿರುವ ಪ್ರಕರಣಗಳಲ್ಲಿ ಹೆಚ್ಚಿನ ಜವಾಬ್ದಾರಿ ವಹಿಸಿ ನಿಯಮಗಳಂತೆ ಪರಿಶೀಲಿಸಿ ಕ್ರಮ ಜರುಗಿಸುವುದು

(5) ವಿಲೇವಾರಿಗಾಗಿ ಬಾಕಿ ಇರುವ ಅರ್ಜಿಗಳನ್ನು ಸಹ ತಕ್ಷಣವೇ ವಿಲೇವಾರಿ ಮಾಡುವುದು. ಅದೇ ರೀತಿ ವಿಲೇವಾರಿಗಾಗಿ ಬಾಕಿ ಇರುವ ಮೇಲ್ಮನವಿಗಳನ್ನು ಸಹ ವಿಲೇವಾರಿ ಮಾಡುವುದು.

(6) ಸಮುದಾಯ ಹಕ್ಕುಗಳಿಗೆ ಸಲ್ಲಿಸಿರುವ ಅರ್ಜಿಗಳನ್ನು ಸಹ (ಫಾರಂ-ಬಿ ಮತ್ತು ಸಿ) ವಿಲೇವಾರಿ ಮಾಡುವುದು.

**ದಿನಾಂಕ:24-07-2019ರಂದು** ಪ್ರಕರಣವು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಬರಲಿರುವುದರಿಂದ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಅಫಿಡವಿಟ್ ಸಲ್ಲಿಸಬೇಕಾಗಿರುವುದರಿಂದ, ತಿರಸ್ಕರಿಸಿದ ಅರ್ಜಿಗಳನ್ನು ಪುನರ್ ಪರಿಶೀಲಿಸುವ ಕಾರ್ಯಕ್ರಮವನ್ನು ಆದ್ಯತೆ ಮೇಲೆ ಕೈಗೊಂಡು **ದಿನಾಂಕ:30-06-2019ರೊಳಗೆ** ಪೂರ್ಣಗೊಳಿಸತಕ್ಕದ್ದು. ಇದಕ್ಕೆ ಲಗತ್ತಿಸಿರುವ ಅನುಬಂಧ [illegible] ರಲ್ಲಿ ಸರ್ಕಾರಕ್ಕೆ ಸಲ್ಲಿಸಲು ಸೂಚಿಸಲಾಗಿದೆ.

(ರಾಜಶ್ರೀ ಹೆಚ್. ಕುಲಕರ್ಣಿ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಸಮಾಜ ಕಲ್ಯಾಣ ಇಲಾಖೆ

<u>ಗೆ:</u>

(1) ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ("Speed Post" ಮೂಲಕ)

(2) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ("Speed Post" ಮೂಲಕ)

(3) ಎಲ್ಲಾ ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣಾಧಿಕಾರಿ/ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಜಂಟಿ/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ (ಈ ಸುತ್ತೋಲೆಯನ್ನು ಸಂಬಂಧಿಸಿದ ಅರಣ್ಯಾಧಿಕಾರಿಗಳಿಗೆ ಮತ್ತು ಎಲ್ಲಾ ಉಪ ವಿಭಾಗಾಧಿಕಾರಿಗಳಿಗೆ ಕಳುಹಿಸುವುದು) } ನಿರ್ದೇಶಕರು, ಪ.ವ.ಕ ಇಲಾಖೆ ಇವರ ಮುಖಾಂತರ

<u>ಪ್ರತಿಗಳು:-</u>

1) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
2) ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
3) ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು
5) ಪ್ರಧಾನ ಅರಣ್ಯ ಮುಖ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, ಬೆಂಗಳೂರು
6) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ ವಿಕಾಸಸೌಧ, ಬೆಂಗಳೂರು
7) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಇವರ ಆಪ್ತ ಕಾರ್ಯದರ್ಶಿ ಬಹುಮಹಡಿಗಳ ಕಟ್ಟಡ, ಬೆಂಗಳೂರು

**ದಿನಾಂಕ:28.11.2024 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಅರಣ್ಯ ಹಕ್ಕು ಕಾಯ್ದೆ ಅನುಷ್ಠಾನ ಮೇಲ್ವಿಚಾರಣಾ ಸಮಿತಿಯ ಸಭೆಯ ಸಭಾ ನಡವಳಿಗಳು.**

**(ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಪಟ್ಟಿಯನ್ನು ಲಗತ್ತಿಸಿದೆ)**

**********

- ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆರವರು ಅರಣ್ಯ ಹಕ್ಕು ಕಾಯ್ದೆಯ ರಾಜ್ಯ ಮಟ್ಟದ ಮೇಲ್ವಿಚಾರಣ ಸಮಿತಿ ಅಧ್ಯಕ್ಷರಾದ ಮಾನ್ಯ ಮುಖ್ಯ ಕಾರ್ಯದರ್ಶಿಗಳು ಹಾಗೂ ಸಮಿತಿಯ ಸದಸ್ಯರನ್ನು ಸಭೆಗೆ ಸ್ವಾಗತಿಸಿ, ಅರಣ್ಯ ಹಕ್ಕು ವಿಷಯ ಕುರಿತು ವಿವರವಾದ ಪ್ರಾತ್ಯಕ್ಷಿಕತೆಯನ್ನು ನೀಡಿದರು.

- ಅರಣ್ಯ ಹಕ್ಕು ಕಾಯ್ದೆಯಡಿ ಸ್ವೀಕೃತವಾದ ಅರ್ಜಿಗಳ ಸ್ಥಿತಿ-ಗತಿಯ ಬಗ್ಗೆ ಮಾಹಿತಿಯನ್ನು ತಿಳಿಸುತ್ತಾ, ಸ್ವೀಕೃತವಾದ ಒಟ್ಟು **2,99,387 ಅರ್ಜಿಗಳ ಪೈಕಿ 16665 ಹಕ್ಕು ಪತ್ರಗಳನ್ನು ವಿತರಿಸಲಾಗಿದ್ದು, 259199 ಅರ್ಜಿಗಳು ತಿರಸ್ಕೃತವಾಗಿರುತ್ತವೆ. ಬಾಕಿ 23523 ಅರ್ಜಿಗಳು ಇತ್ಯರ್ಥವಾಗದೇ** 16 ಜಿಲ್ಲೆಗಳಲ್ಲಿ ಬಾಕಿ ಉಳಿದಿರುತ್ತವೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.

- ಮುಂದುವರೆದು, ಮಾನ್ಯ ಸರ್ವೋಚ್ಚ ನ್ಯಾಯಾಲಯವು W.P.(S)(Civil)109/2008 ರ ಆದೇಶದಲ್ಲಿ ನೀಡಿದ ನಿರ್ದೇಶನದಂತೆ **ತಿರಸ್ಕೃತ ಅರ್ಜಿಗಳನ್ನು ಪುನರ್ ಪರಿಶೀಲನೆ ಮಾಡುವ ಕಾರ್ಯವನ್ನು ಪೂರ್ಣಗೊಳಿಸಬೇಕಾಗಿದೆಂದು** ತಿಳಿಸಿದರು. ಇದಕ್ಕೆ ಸಂಬಂದಿಸಿದಂತೆ ಸಮಾಜ ಕಲ್ಯಾಣ ಇಲಾಖೆಯ ಸುತ್ತೋಲೆ ದಿನಾಂಕ: 22.04.2019 ರಲ್ಲಿ ತಿರಸ್ಕರಿಸಿದ ಅರ್ಜಿಗಳನ್ನು ಪುನರ್ ಪರಿಶೀಲನೆಯ ಸಂದರ್ಭದಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳ ಬಗ್ಗೆ ವಿವರವಾಗಿ ತಿಳಿಸಿರುವಂತೆ ಕ್ರಮ ಕೈಗೊಳ್ಳಲು ಮಾನ್ಯ ಮುಖ್ಯ ಕಾರ್ಯದರ್ಶಿಗಳು ಸೂಚಿಸಿದರು.

- ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಬಾಕಿಯಿರುವ ಅರಣ್ಯ ಹಕ್ಕು ತಿರಸ್ಕೃತ ಅರ್ಜಿಗಳನ್ನು ವಿಲೇವಾರಿ ಮಾಡಲು **ಪ್ರತಿ ವಾರಕೊಮ್ಮೆ ಗ್ರಾಮಸಭೆ, ಪ್ರತಿ 15 ದಿನಕ್ಕೊಮ್ಮೆ ಉಪ ವಿಭಾಗ ಸಮಿತಿ ಹಾಗೂ ಜಿಲ್ಲಾಮಟ್ಟದ ಸಮಿತಿಯು ಕನಿಷ್ಠ ತಿಂಗಳಿಗೊಮ್ಮೆ ಸಭೆ ನಡೆಸಿ ಎರಡು ತಿಂಗಳೊಳಗಾಗಿ ಪೂರ್ಣಗೊಳಿಸಲು** ಸಂಬಂಧಿಸಿದ ಇಲಾಖೆಗಳಿಗೆ ಸೂಚಿಸಿದರು.

- ದಿನಾಂಕ: 13.02.2019 ರ ಅಂತ್ಯಕ್ಕೆ ಇದ್ದ 180527 ಪ್ರಕರಣಗಳಲ್ಲಿ ಬಾಕಿಯಿರುವ 79985 ಪ್ರಕರಣಗಳನ್ನು ಪುನರ್ ಪರಿಶೀಲನೆಗೆ ತಕ್ಷಣ ಕ್ರಮವಹಿಸುವುದು, ಮೊದಲ ಹಂತದಲ್ಲಿ ಅಗತ್ಯವಿರುವ ದಾಖಲೆಗಳಾದ ಗೆಜೆಟಿಯರ್ ಗಳು, ಜನಗಣತಿ, ಸರ್ವೆ ಸೆಟಲ್ ಮೆಂಟ್, ಉಪಗ್ರಹ ಆಧಾರಿತ ಚಿತ್ರಗಳು ಇತ್ಯಾದಿ ದಾಖಲೆಗಳ ಸಾಕ್ಷ್ಯಗಳನ್ನು ಒದಗಿಸುವ ಕಾರ್ಯವನ್ನು ಕಂದಾಯ ಇಲಾಖೆ, ಪಂಚಾಯತ್ ರಾಜ್ ಇಲಾಖೆ, ಅರಣ್ಯ ಇಲಾಖೆ, ಸಮಾಜ ಕಲ್ಯಾಣ ಇಲಾಖೆ/ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ **ಒಂದು ತಿಂಗಳೊಳಗಾಗಿ ಪೂರ್ಣಗೊಳಿಸುವುದು ಹಾಗೂ ಎರಡನೇ ಹಂತದಲ್ಲಿ**

**ಪರಿಶೀಲನೆ ಕಾರ್ಯವನ್ನು ಕೈಗೊಂಡು ಪೂರ್ಣಗೊಳಿಸಲು** ಮಾನ್ಯ ಮುಖ್ಯ ಕಾರ್ಯದರ್ಶಿಗಳು ಸೂಚಿಸಿದರು.

➢ ಮೇ 2021 ರಿಂದ ರಾಜ್ಯದಲ್ಲಿ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿಗಳಲ್ಲಿ ಚುನಾವಣೆ ನಡೆಯದಿರುವುದರಿಂದ ಉಪ ವಿಭಾಗ ಸಮಿತಿ ಮತ್ತು ಜಿಲ್ಲಾಮಟ್ಟದ ಸಮಿತಿಗಳಿಗೆ ಅಧಿಕಾರೇತರ ಸದಸ್ಯರು ನಾಮ ನಿರ್ದೇಶನವಾಗಿಲ್ಲದಿರುವುದರ ಬಗ್ಗೆ ಚರ್ಚಿಸಲಾಯಿತು ಹಾಗೂ ಸದರಿ ಸಮಿತಿಗಳಿಗೆ ಕೋರಂ ಅವಶ್ಯಕತೆಯ ಬಗ್ಗೆ **ಕಾಯ್ದೆಯಲ್ಲಿ ನಿರ್ದಿಷ್ಟಪಡಿಸಿಲ್ಲದಿರುವುದರಿಂದ ಪುನರ್ ಪರಿಶೀಲನೆ ಕಾರ್ಯವನ್ನು ಹಾಲಿ ಇರುವ ಸಮಿತಿಗಳ ಸದಸ್ಯರಿಂದ ನಿರ್ವಹಿಸಬಹುದಾಗಿದೆ** ಎಂದು ತಿಳಿಸಲಾಯಿತು.
**(ಕ್ರಮ. ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ/ಕಂದಾಯ/ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಗಳು)**

➢ ಅರಣ್ಯ ಹಕ್ಕು ಪಡೆದು ಫಲಾನುಭವಿಗಳ ಹೆಸರುಗಳನ್ನು ಪಹಣಿಯ ಕಾಲಂ ನಂಬರ್ 11 ರಲ್ಲಿ ದಾಖಲಾಗದೆ ಇರುವ 3430 ಪ್ರಕರಣಗಳಲ್ಲಿ ಈ ಪ್ರಕ್ರಿಯೆಯನ್ನು ಒಂದು ತಿಂಗಳೊಳಗೆ ಪೂರ್ಣಗೊಳಿಸಲು ಸೂಚಿಸಿದರು. ಸರ್ವೆ ನಂಬರ್ ಲಭ್ಯವಿಲ್ಲದಿರುವ ಪ್ರಕರಣಗಳಲ್ಲಿ **ಅರಣ್ಯ ಇಲಾಖೆಯಿಂದ Latitude, Longitude ಗಳನ್ನು 15 ದಿನಗಳೊಳಗಾಗಿ ಒದಗಿಸುವಂತೆ** ಮಾನ್ಯ ಮುಖ್ಯ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಅರಣ್ಯ ಇಲಾಖೆ)**

➢ ಚಾಮರಾಜನಗರ ಜಿಲ್ಲೆಯ **ಅರಣ್ಯ ಜಮೀನಿನ ಸರ್ವೆಯನ್ನು ಜಂಟಿಯಾಗಿ** ಕೈಗೊಳ್ಳಲು ಭೂ ಕಂದಾಯ ಹಾಗೂ ಭೂಮಾಪನ ಇಲಾಖೆ ಹಾಗೂ ಅರಣ್ಯ ಇಲಾಖೆಗಳಿಗೆ ಮಾನ್ಯ ಮುಖ್ಯ ಕಾರ್ಯದರ್ಶಿಯವರು ಸೂಚಿಸಿದರು.

**( ಕ್ರಮ: ಕಂದಾಯ(ಭೂಮಾಪನ)/ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಗಳು)**

➢ ಮಾನ್ಯ ಮುಖ್ಯ ಕಾರ್ಯದರ್ಶಿಗಳು ಮಾತನಾಡುತ್ತಾ, **ಪಹಣಿಯ ಕಾಲಂ 11 ರಲ್ಲಿ ನಮೂದಿಸಲ್ಪಟ್ಟ** ಅರಣ್ಯ ಹಕ್ಕು ಪಡೆದ ಫಲಾನುಭವಿಗಳಿಗೆ ಸರ್ಕಾರದ ವಿವಿಧ ಯೋಜನೆಗಳ ಸೌಲಭ್ಯ ನೀಡಬೇಕಾಗಿದ್ದು, **Fruit ID ಸೃಜಿಸುವ** ಸಂಬಂಧ ಸಿಆಸು ಇಲಾಖೆ (ಇ-ಆಡಳಿತ) ಮತ್ತು ಕಂದಾಯ ಇಲಾಖೆಗಳು ಅಗತ್ಯವಿರುವ ತಂತ್ರಾಂಶ ರೂಪಿಸಲು ಕ್ರಮವಹಿಸುವಂತೆ ಸೂಚಿಸಿದರು.

**( ಕ್ರಮ: ಸಿ.ಆ.ಸು.ಇ ( ಇ-ಆಡಳಿತ)/ ಕಂದಾಯ ಇಲಾಖೆ)**

➢ ಮಾನ್ಯ ಕಾರ್ಯದರ್ಶಿಗಳು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆರವರು ಸಮುದಾಯ **ಹಕ್ಕಿನಡಿ ಕಿರು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಲು** ಕೆಲವು ಜಿಲ್ಲೆಗಳಲ್ಲಿ ಅವಕಾಶ ನೀಡದಿರುವುದರ ಬಗ್ಗೆ ಸಭೆಯ ಗಮನಕ್ಕೆ ತಂದರು. ಮಾನ್ಯ ಮುಖ್ಯ ಕಾರ್ಯದರ್ಶಿಗಳು ಅರಣ್ಯ, ಕಂದಾಯ ಹಾಗೂ ಪರಿಶಿಷ್ಟ ಪಂಗಡ ಇಲಾಖೆಗಳಿಂದ ಸದರಿ ಫಲಾನುಭವಿಗಳಿಗೆ **ಜಂಟಿ ಗುರುತಿನ ಚೀಟಿಯನ್ನು** ನೀಡಲು

ಸೂಚಿಸಿದರು ಹಾಗೂ ಅಂತಹ ಗುರುತಿನ ಚೀಟಿ ಹೊಂದಿರುವವರಿಗೆ ಅರಣ್ಯ ಉತ್ಪನ್ನ ಸಂಗ್ರಹಿಸಲು ಪ್ರವೇಶ (Entry) ನೀಡಲು ಅರಣ್ಯ ಇಲಾಖೆಯಿಂದ ಕ್ಷೇತ್ರ ಮಟ್ಟದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡುವಂತೆ ಸೂಚಿಸದರು.

**(ಕ್ರಮ: ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ/ಕಂದಾಯ/ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಗಳು)**

- ಶ್ರೀ ಎ.ಜಿ.ಯೋಗೇಂದ್ರ, ನಿವೃತ್ತ ಅರಣ್ಯ ಪಾಲಕ, ಪ್ರಧಾನ ಕಾರ್ಯದರ್ಶಿ, ಮಾಹಿತಿ ಹಕ್ಕು ಹಾಗೂ ಮಾನವ ಹಕ್ಕು ಸಮಿತಿ, ವಿನೋಬ ನಗರ, ಶಿವಮೊಗ್ಗ ಇವರು ಜಿಲ್ಲಾಮಟ್ಟದ ಅರಣ್ಯ ಹಕ್ಕು ಸಮಿತಿಯ ನಡಾವಳಿ ದಿನಾಂಕ:17.03.2015, ದಿ.20.10.2015 ಹಾಗೂ ದಿ:05.07.20216ರಲ್ಲಿ **ಅಕ್ರಮವಾಗಿ ಹಕ್ಕು ಪತ್ರ ವಿತರಿಸಲಾಗಿದೆ** ಎಂದು ಆರೋಪಿಸಿ ನೀಡಲಾದ ದೂರು ಪ್ರಕರಣದಲ್ಲಿ ಮಾನ್ಯ ಉಪ ಲೋಕಾಯುಕ್ತ-2 ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ-12(1)ರ ಅಡಿಯಲ್ಲಿ ದಿನಾಂಕ:28.02.2018 ರಂದು ಈ ಕೆಳಕಂಡಂತೆ ವರದಿಸಿರುತ್ತಾರೆ.

.. In view of said facts and material on record, except the reply of respondent No.1 in complaint No:3007/2016, replies of all other respondent are found not sufficient to drop the proceedings against them, a report u/Sec 12(3) of Karnataka Lokayukta Act, 1984 recommending the Competent Authority to initiate disciplinary proceedings against them.

The grievance of the complainant made in this complaint is well founded. Therefore, cause of action has arisen to this authority to make recommendation u/Sec. 12(1) of Karnataka Lokayukta Act, 1984 to submit action taken report for resumption of illegally granted forest land to the Government under the proceedings dated: 17/03/2015, 20/10/2015 and 05/07/2016.

- ಸದರಿ ವಿಷಯದ ಬಗ್ಗೆ ಚರ್ಚಿಸಿ, ಜಿಲ್ಲಾಮಟ್ಟದ ಅರಣ್ಯ ಹಕ್ಕು ಸಮಿತಿಗೆ ಈ ಪ್ರಕರಣಗಳನ್ನು ಪುನರ್ ಪರಿಶೀಲನೆಗಾಗಿ ಹಿಂದಿರುಗಿಸಲು ಸಮಿತಿಯು ತಿರ್ಮಾನಿಸುವುದಾಗಿ ನಿರ್ಣಯಿಸಲಾಯಿತು.

**(ಕ್ರಮ: ಜಿಲ್ಲಾ ಮಟ್ಟದ ಅರಣ್ಯ ಹಕ್ಕು ಸಮಿತಿ, ಶಿವಮೊಗ್ಗ ಜಿಲ್ಲೆ)**

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಡಾ: ಶಾಲಿನಿ ರಜನೀಶ್)
**ಸರ್ಕಾರದ ಮುಖ್ಯ ಕಾರ್ಯದರ್ಶಿ**

**ದಿನಾಂಕ:04.07.2025ರಂದು ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ಅರಣ್ಯ ಹಕ್ಕು ಕಾಯ್ದೆಯ ಅನುಷ್ಠಾನ ಪ್ರಕ್ರಿಯೆಯಲ್ಲಿನ ಗೊಂದಲಗಳನ್ನು ಬಗೆಹರಿಸುವ ಕುರಿತ ಸಭೆಯ ನಡವಳಿಗಳು.**

ಸಭೆಯಲ್ಲಿ ಹಾಜರಿದ್ದವರ ವಿವರವನ್ನು ಲಗತ್ತಿಸಿದೆ.

******

1. ಸರ್ಕಾರದ ಕಾರ್ಯದರ್ಶಿಗಳು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ರವರು ಸಭೆಯ ಅಧ್ಯಕ್ಷತೆ ವಹಿಸಿದ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಸ್ವಾಗತಿಸಿದರು. ಅರಣ್ಯ ಭೂಮಿ ಸಾಗುವಳಿದಾರರ (ಭೂಮಿ ಹಕ್ಕು) ಹೋರಾಟ ಸಮಿತಿ, ಉತ್ತರ ಕನ್ನಡ ಜಿಲ್ಲೆ ಇವರ ಮನವಿಯಲ್ಲಿನ ವಿಷಯಗಳನ್ನು ಸಭೆಯ ಮುಂದೆ ಮಂಡಿಸಿದರು.

2. ರಾಜ್ಯದಲ್ಲಿ ಅರಣ್ಯ ಹಕ್ಕು ಕಾಯ್ದೆಯಡಿ ಇತರೆ ಪಾರಂಪರಿಕ ಅರಣ್ಯವಾಸಿ (OTFDs)ಗಳ ಹೆಚ್ಚಿನ ಸಂಖ್ಯೆಯ ಅರ್ಜಿಗಳು ತಿರಸ್ಕೃತವಾಗಿರುವ ಬಗ್ಗೆ ಚರ್ಚಿಸಲಾಯಿತು. ಈ ಸಂಬಂಧ ಅರಣ್ಯ ಹಕ್ಕುಗಳನ್ನು ಮತ್ತು ಅಧಿಭೋಗವನ್ನು ಮಾನ್ಯ ಮಾಡಲು ಅರಣ್ಯ ಹಕ್ಕು ಕಾಯ್ದೆಯ ನಿಯಮ 13 ರಲ್ಲಿ ನಿಗಧಿಪಡಿಸಲಾದ 9 ಸಾಕ್ಷ್ಯಗಳ ಪೈಕಿ ಯಾವುದಾದರು ಒಂದಕ್ಕಿಂತ ಹೆಚ್ಚಿನ ಸಾಕ್ಷ್ಯಗಳನ್ನು ಅರಣ್ಯದ ಅಥವಾ ಅರಣ್ಯ ಜಮೀನಿನ ಮೇಲೆ ಅವಲಂಬಿತವಾಗಿರುವ ಬಗ್ಗೆ (ಮೂರು ತಲೆಮಾರು) ಒದಗಿಸಬೇಕಾಗಿರುತ್ತದೆ.

3. ಅರಣ್ಯ ಹಕ್ಕು ಸಮಿತಿಗಳು ಅರ್ಜಿಗಳ ಪರಿಶೀಲನೆ ನಡೆಸುವಾಗ ಕನಿಷ್ಟ 2 ದಾಖಲೆಗಳನ್ನು ಒದಗಿಸುವಂತೆ ನಿರ್ಧಿಷ್ಟಪಡಿಸುವಂತಿಲ್ಲ ಬದಲಿಗೆ ಒಂದಕ್ಕಿಂತ ಹೆಚ್ಚಿನ ಯಾವುದೇ ಸಾಕ್ಷ್ಯವಾಗಿದ್ದರೂ ಪರಿಶೀಲನೆ ನಡೆಸತಕ್ಕದ್ದು.

4. ನಿಯಮ 13 ರಲ್ಲಿ ಕ್ಲೇಮದಾರರನ್ನು ಹೊರತುಪಡಿಸಿ ಹಿರಿಯರ ಹೇಳಿಕೆ, ಸ್ಥಳೀಯ ಸಮುದಾಯಗಳು ಕಟ್ಟಿದ ರಚನೆಗಳ ಅವಶೇಷ, ನಿರ್ಮಾಣಗಳನ್ನು (ಬಾವಿ, ಸ್ಮಶಾನ, ಮರಗಳನ್ನು ಬೆಳೆಸಿರುವುದು, ಮನೆ, ಒಡ್ಡು ಇತರೆ) ಪರಿಗಣಿಸಿ ಹಕ್ಕುಗಳನ್ನು ಮಾನ್ಯ ಮಾಡಲು ಅವಕಾಶಗಳಿರುತ್ತವೆ ಎಂದು ಸಭೆಯಲ್ಲಿ ಚರ್ಚಿಸಲಾಯಿತು.

5. ಉತ್ತರ ಕನ್ನಡ ಜಿಲ್ಲೆಯಲ್ಲಿ ಅರ್ಜಿಗಳು ತಿರಸ್ಕೃತಗೊಳ್ಳಲು ಪ್ರಮುಖ ಕಾರಣ, ಅರ್ಜಿಗಳನ್ನು ಪರಿಶೀಲಿಸಲು ಅನುಸರಿಸುತ್ತಿರುವ ಕ್ರಮ ಹಾಗೂ ಮಾನದಂಡಗಳ ಬಗ್ಗೆ, ಜಿಲ್ಲಾಧಿಕಾರಿಗಳು ವಿವರಣೆ ನೀಡಿ, ಗ್ರಾಮ ಅರಣ್ಯ ಹಕ್ಕು ಸಮಿತಿಗಳಲ್ಲಿ ತಿರಸ್ಕೃತವಾದ ಅರ್ಜಿಗಳ ಅರ್ಜಿದಾರರಿಗೆ ಪುನಃ ಅವಕಾಶ ನೀಡಿದರೂ ಸಹ ಅರ್ಜಿದಾರರು ಅಗತ್ಯ ದಾಖಲೆಗಳ ಪುರಾವೆಗಳನ್ನು ಸಲ್ಲಿಸದೇ ಇರುವುದರಿಂದ ಅರ್ಜಿಗಳನ್ನು ತಿರಸ್ಕೃತಗೊಳಿಸಲಾಗಿದೆ ಎಂದು ಅವರು ಸಭೆಗೆ ತಿಳಿಸಿದರು.

6. ಅರಣ್ಯ ಇಲಾಖೆಯ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಮೌಲ್ಯಮಾಪನ ಮತ್ತು ಕಾರ್ಯಯೋಜನೆ) ಮಾತನಾಡುತ್ತಾ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಆಗಿರುವ ಅರಣ್ಯ ಒತ್ತುವರಿಗಳಲ್ಲಿ, ಒತ್ತುವರಿ ಭೂಮಿ ಮತ್ತು ಅವರ ಪಟ್ಟಾ ಭೂಮಿ ಸೇರಿ 3.00 ಎಕರೆಗಿಂತ ಕಡಿಮೆ ಇರುವ ಒತ್ತುವರಿದಾರರನ್ನು ಒಕ್ಕಲೆಬ್ಬಿಸಬಾರದೆಂದು ಸರ್ಕಾರದ ಸುತ್ತೋಲೆ ದಿನಾಂಕ:13.03.2015ರಲ್ಲಿ ಹೊರಡಿಸಲಾಗಿದೆ. ಎಂದು ತಿಳಿಸಿದರು. ಮುಂದುವರೆದು, 1978 ಕ್ಕೆ ಮುಂಚಿತವಾಗಿ ಅರಣ್ಯ ಪ್ರದೇಶವನ್ನು ಅತಿಕ್ರಮಣ ಮಾಡಿರುವ ಪ್ರಕರಣಗಳಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಸಮಿತಿಯಲ್ಲಿ ಅರ್ಹ ಕುಟುಂಬಗಳಿಗೆ ಅರಣ್ಯ ಜಮೀನಿನ ಹಕ್ಕಗಳನ್ನು ಕ್ರಮಬದ್ಧಗೊಳಿಸಲಾಗಿದೆ ಎಂದು ತಿಳಿಸಿದರು.

7. ರಾಜ್ಯ ಸರ್ಕಾರವು ದಿನಾಂಕ:01.12.2010 ಮತ್ತು 30.05.2025 ರ ಪತ್ರಗಳಲ್ಲಿ ಕೇಂದ್ರ ಬುಡಕಟ್ಟು ಮಂತ್ರಾಲಯ ರವರಿಗೆ, ಇತರೆ ಪಾರಂಪರಿಕ ಅರಣ್ಯವಾಸಿ (OTFDs)ಗಳಿಗೆ ಸಂಬಂಧಿಸಿದಂತೆ ಅರಣ್ಯ ಹಕ್ಕು ಕಾಯ್ದೆಯ ಕಲಂ 2(o) ರಲ್ಲಿನ ಪ್ರಸ್ತುತ ಇರುವ ಮೂರು ತಲೆಮಾರುಗಳ (75 ವರ್ಷ) ವಾಸದ ಅವಧಿಯನ್ನು ಸಡಿಲಗೊಳಿಸುವಂತೆ ಕೋರಿ ಸಲ್ಲಿಸಲಾದ ಪ್ರಸ್ತಾವನೆಗಳನ್ನು ಕೇಂದ್ರ ಬುಡಕಟ್ಟು ಮಂತ್ರಾಲಯವು ದಿನಾಂಕ:30.06.2023 ಮತ್ತು 28.04.2025 ರ ಪತ್ರಗಳಲ್ಲಿ ಪ್ರಸ್ತಾವನೆಗಳನ್ನು ಪುರಸ್ಕರಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ ಎಂಬ ಅಂಶಗಳನ್ನು ಮಾನ್ಯ ಮುಖ್ಯ ಕಾರ್ಯದರ್ಶಿಗಳ ಗಮನಕ್ಕೆ ತರಲಾಯಿತು.

8. ಈ ವಿಷಯಗಳನ್ನು ಗಮನಿಸುತ್ತಾ, ಯಾವುದೇ ಒಬ್ಬ ಅರ್ಹ ಅರ್ಜಿದಾರನು ಹಕ್ಕಿನಿಂದ ವಂಚಿತನಾಗಬಾರದು, ಈ ಹಿನ್ನಲೆಯಲ್ಲಿ ಯಾವುದೇ ಒಂದು ಅರ್ಜಿಯನ್ನು ತಿರಸ್ಕರಿಸುವ ಮೊದಲು ನೈಸರ್ಗಿಕ ನ್ಯಾಯದಡಿ ಪರಿಶೀಲಿಸಿ ಕ್ರಮವಹಿಸುವಂತೆ ಮಾನ್ಯ ಮುಖ್ಯ ಕಾರ್ಯದರ್ಶಿಗಳು ಸೂಚಿಸಿದರು.

9. ಜಿಲ್ಲಾಧಿಕಾ ಗಳು, ಉತ್ತರ ಕನ್ನಡ ಜಿಲ್ಲೆರವರಿಗೆ, ಶೀಘ್ರವಾಗಿ ನಿಯಮಾನುಸಾರ ತಿರಸ್ಕೃತ ಅರ್ಜಿಗಳ ಪುನರ್ ಪರಿಶೀಲನೆ ಕಾರ್ಯವನ್ನು ಪೂರ್ಣಗೊಳಿಸಿ ವರದಿಯನ್ನು ನೀಡಲು ಸೂಚಿಸಲಾಯಿ .

10. ಈಗಾಗಲೇ ಹಿಂದಿನ ಸಭೆಗಳಲ್ಲಿ ಮತ್ತು ಸರ್ಕಾರದ ದಿನಾಂಕ:22.04.2019 ಮತ್ತು 14.03.2025 ರ ಸುತ್ತೋಲೆಗಳಲ್ಲಿ ನೀಡಿರುವ ಮಾರ್ಗಸೂಚಿಗಳಲ್ಲಿ ತಿರಸ್ಕೃತ ಅರ್ಜಿಗಳನ್ನು ಪರಿಶೀಲನಾ ಕಾರ್ಯ ಕೈಗೊಳ್ಳುವ ಸಂದರ್ಭದಲ್ಲಿ ಅನುಸರಿಸಬೇಕಾದ ವಿಧಿ – ವಿಧಾನಗಳ ಬಗ್ಗೆ ತಿಳಿಸಲಾಗಿರುತ್ತದೆ. ಅದನ್ನು ಈ ಸಭೆಯಲ್ಲಿ ಕೂಡ ಪುನರುಚ್ಚರಿಸಲಾಯಿತು.

11. ಅರಣ್ಯ ಹಕ್ಕು ಕಾಯ್ದೆ ಹಾಗೂ ನಿಯಮಗಳಂತೆ ಪರಿಶೀಲನಾ ಪಟ್ಟಿಯನ್ನು ಸಿದ್ಧಪಡಿಸಿಕೊಂಡು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಲ್ಲಿ ನೀಡಿರುವ ನಿರ್ದೇಶನಗಳ ಅನುಸಾರ ಕಾಲಮಿತಿಯೊಳಗೆ ತಿರಸ್ಕೃತ ಅರ್ಜಿಗಳ ಪುನರ್ ಪರಿಶೀಲನೆ ಕೈಗೊಳ್ಳಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಮತ್ತೊಮ್ಮೆ ನಿರ್ದೇಶನ ನೀಡುವಂತೆ ಸರ್ಕಾರದ ಕಾರ್ಯದರ್ಶಿಗಳು, ಪರಿಶಿಷ್ಟ ಪಂಗಡದ ಕಲ್ಯಾಣ ಇಲಾಖೆ ರವರಿಗೆ ಸೂಚಿಸಲಾಯಿತು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**(ಡಾ. ಶಾಲಿನಿ ರಜನೀಶ್)**
**ಸರ್ಕಾರದ ಮುಖ್ಯ ಕಾರ್ಯದರ್ಶಿ**

## ಸಾಕ್ಷ್ಯ ಪಟ್ಟಿ-2

### ಸಮುದಾಯದ ಅರಣ್ಯ ಹಕ್ಕುಗಳನ್ನು ನಿರ್ಧರಿಸಲು ಸಾಕ್ಷ್ಯ

| ಕ್ರ. ಸಂ. | ಸಾಕ್ಷ್ಯ | ಲಭ್ಯವಿದೆ/ ಲಭ್ಯವಿಲ್ಲ |
|---|---|---|
| 1 | 13 (2) ಎ ರಲ್ಲಿರುವ ನಿಸ್ತಾರ್‌ನಂಥ ಯಾವುದೇ ಹೆಸರಿನಿಂದ ಕರೆಯಲಾಗುವ ಸಮುದಾಯದ ಹಕ್ಕುಗಳನ್ನು | |
| 2. | 13 (2) ಬಿ. ರಲ್ಲಿರುವ ಪಾರಂಪರಿಕ ಗೋಮಾಳಗಳು: ಬೇರುಗಳು ಮತ್ತು ಗೆಡ್ಡೆಗಳು ಮೇವು, ಅರಣ್ಯ ಖಾದ್ಯ ಹಣ್ಣುಗಳು ಮತ್ತು ಇತರ ಸಣ್ಣ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವ ಪ್ರದೇಶಗಳು, ಮೀನುಗಾರಿಕೆ ಪ್ರದೇಶಗಳು: ನೀರಾವರಿ ಪದ್ವತಿಗಳು; ಮಾನವ ಅಥವಾ ಪಶು ಸಂಪತ್ತಿನ ಬಳಕೆಯ ಜನ ಮೂಲಗಳು ಗಿಡಮೂಲಿಕೆ ವೃತ್ತಿಗಾರರು ಔಷಧೀಯ ಸಸ್ಯ ಸಂಗ್ರಹಣೆ ಮಾಡುವ ಪ್ರದೇಶಗಳನ್ನು | |
| 3. | 13 (2) ಸಿ. ರಲ್ಲಿರುವ ಸ್ಥಳೀಯ ಸಮುದಾಯಗಳು ಕಟ್ಟಿದ ರಚನೆಗಳ ಅವಶೇಷಗಳು, ಪವಿತ್ರ ಮರಗಳು, ತೋಪುಗಳು ಮತ್ತು ಕೊಳಗಳು ಅಥವಾ ನದೀ ಪಾತ್ರದ ಪ್ರದೇಶಗಳು, ಹೂಳುವ ಅಥವಾ ಸುಡುವ ಸ್ಮಶಾನಗಳನ್ನು | |

**ಷರಾ:** ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ನಿಯಮಗಳು, 2007 ಕಲಂ 13 (3) ರಲ್ಲಿ ಪ್ರಸ್ತಾಪಿಸಿರುವಂತೆ ಅರಣ್ಯ ಹಕ್ಕು ಗಳನ್ನು ನಿರ್ದರಿಸುವಲ್ಲಿ ಕಲಂ 13(2) ರಲ್ಲಿ ಪ್ರಸ್ತಾಪಿಸಿರುವ ಸಾಕ್ಷಿಗಳ ಪೈಕಿ ಒಂದಕ್ಕಿಂತ ಹೆಚ್ಚು ಸಾಕ್ಷ್ಯಗಳನ್ನು ಸಲ್ಲಿಸಿರುತ್ತಾರೆ/ಸಲ್ಲಿಸಿರುವುದಿಲ್ಲ.

ಸದಸ್ಯ ಕಾರ್ಯದರ್ಶಿ

ಅರಣ್ಯ ಹಕ್ಕು ಸಮಿತಿ

## ಸಾಕ್ಷ್ಯ ಪಟ್ಟಿ-1

### ವೈಯಕ್ತಿಕ ಅರಣ್ಯ ಹಕ್ಕುಗಳನ್ನು ನಿರ್ಧರಿಸಲು ಸಾಕ್ಷ್ಯ

| ಕ್ರ. ಸಂ | ಸಾಕ್ಷ್ಯ | ಲಭ್ಯವಿದೆ/ ಲಭ್ಯವಿಲ್ಲ |
|---|---|---|
| 1. | 13 (1) ಎ. ರಲ್ಲಿ ಪ್ರಸ್ತಾಪಿಸಿರುವ ಸಾರ್ವಜನಿಕ ದಸ್ತಾವೇಜುಗಳು, ಸರ್ಕಾರಿ ದಾಖಲೆಗಳು | |
| 2. | 13 (1) ಬಿ. ರಲ್ಲಿ ಪ್ರಸ್ತಾಪಿಸಿರುವ ಅಧಿಕೃತ ಸರ್ಕಾರಿ ದಸ್ತಾವೇಜುಗಳು | |
| 3 | 13 (1) ಸಿ. ರಲ್ಲಿ ಪ್ರಸ್ತಾಪಿಸಿರುವ ಖಾಯಂ ಆಗಿ ಅಭಿವೃದ್ಧಿ ಪಡಿಸಿದಂಥ ವಾಸ್ತವಿಕ ಸಂಗತಿಗಳು | |
| 4. | 13 (1) ಡಿ. ರಲ್ಲಿರುವ ನ್ಯಾಯಾಲಯದ ಆದೇಶಗಳು, ತೀರ್ಪುಗಳೂ ಸೇರಿದಂತೆ ಅರೆನ್ಯಾಯಿಕ ಮತ್ತು ನ್ಯಾಯಿಕ ದಾಖಲೆಗಳು | |
| 5 | 13 (1) ಇ. ರಲ್ಲಿರುವ ಯಾವುದೇ ಅರಣ್ಯ ಹಕ್ಕುಗಳ ಉಪಭೋಗವನ್ನು ವಿವರಿಸುವಂಥ ಮತ್ತು ಭಾರತ ಮಾನವ ವಿಕಾಸ ವಿಜ್ಞಾನ ಸಮೀಕ್ಷೆಯಂಥ ಪ್ರಸಿದ್ಧ ಸಂಸ್ಥೆಗಳ ಮೂಲಕ ರೂಢಿಗತ ಕಾನೂನು ಬಲ ಹೊಂದಿರುವಂಥ ಸಂಶೋಧನ ಅಧ್ಯಯನಗಳು, ರೂಢಿಗಳು ಮತ್ತು ಸಂಪ್ರದಾಯಗಳನ್ನು ದಸ್ತಾವೇಜು ರೂಪದಲ್ಲಿ ಸಂಗ್ರಹಿಸಿಡುವುದು. | |
| 6. | 13 (1) ಎಫ್. ರಲ್ಲಿರುವ ಹಿಂದಿನ ರಾಜ ಸಂಸ್ಥಾನಗಳಿಂದ ಅಥವಾ ಪ್ರಾಂತ್ಯಗಳಿಂದ ಅಥವಾ ಅಂಥ ಇತರ ಮಧ್ಯವರ್ತಿಗಳಿಂದ ಪಡೆದುಕೊಂಡ ನಕ್ಷೆಗಳು, ಹಕ್ಕುಗಳ ದಾಖಲೆ ವಿಶೇಷ ಅಧಿಕಾರಿಗಳು, ರಿಯಾಯಿತಿಗಳು, ಅನುಕೂಲಗಳು ಸೇರಿದಂತೆ ಯಾವುದೇ ದಾಖಲೆಗಳು | |
| 7. | 13 (1) ಜಿ. ರಲ್ಲಿರುವ ಬಾವಿಗಳು, ಸ್ಮಶಾನಗಳು, ಪವಿತ್ರ ಸ್ಥಳಗಳಂಥ ಪ್ರಾಚೀನತೆಯನ್ನು ರುಜುವಾತುಪಡಿಸುವ ಪಾರಂಪರಿಕ ರಚನೆಗಳನ್ನು; | |
| 8 | 13 (1) ಹೆಚ್. ರಲ್ಲಿರುವ ಹಿಂದಿನ ಭೂ ದಾಖಲೆಗಳಲ್ಲಿ ಸಮೂದಿಸಿದ ಅಥವಾ ಪ್ರಾಚೀನ ಕಾಲದಲ್ಲಿ ಹಳ್ಳಿಯಲ್ಲಿ ಕಾನೂನು ಸಮ್ಮತವಾದ ನಿವಾಸಿಯೆಂದು ಮಾನ್ಯತೆ ಪಡೆದ ವ್ಯಕ್ತಿಗಳ ಪೂರ್ವಜರನ್ನು ಗುರುತಿಸುವ ವಂಶಾವಳಿ | |
| 9 | 13 (1) ಐ. ರಲ್ಲಿರುವ ಕ್ಲೇಮುದಾರರನ್ನು ಹೊರತುಪಡಿಸಿ ಲಿಖಿತದಲ್ಲಿರುವ ಹಿರಿಯರ ಹೇಳಿಕೆಗಳು | |

**ಷರಾ:** ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ನಿಯಮಗಳು, 2007 ಕಲಂ 13 (3) ರಲ್ಲಿ ಪ್ರಸ್ತಾಪಿಸಿರುವಂತೆ ಅರಣ್ಯ ಹಕ್ಕು ಗಳನ್ನು ನಿರ್ಧರಿಸುವಲ್ಲಿ ಕಲಂ 13(1) ರಲ್ಲಿ ಪ್ರಸ್ತಾಪಿಸಿರುವ ಸಾಕ್ಷಿಗಳ ಪೈಕಿ ಒಂದಕ್ಕಿಂತ ಹೆಚ್ಚು ಸಾಕ್ಷ್ಯಗಳನ್ನು ಸಲ್ಲಿಸಿರುತ್ತಾರೆ/ಸಲ್ಲಿಸಿರುವುದಿಲ್ಲ.

ಸದಸ್ಯ ಕಾರ್ಯದರ್ಶಿ

ಅರಣ್ಯ ಹಕ್ಕು ಸಮಿತಿ

ಕರ್ನಾಟಕ ಸರ್ಕಾರ

ಸಂಖ್ಯೆ:STW/SECA/TSP/1/2025

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ, ಬೆಂಗಳೂರು,
ದಿನಾಂಕ:14.03.2025

# ಸುತ್ತೋಲೆ

ವಿಷಯ: ಅರಣ್ಯ ಹಕ್ಕು ಕಾಯ್ದೆಯಡಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ w.p.(S)(Civil)109/2008 ದಿನಾಂಕ:28.02.2019 ರಲ್ಲಿ ನೀಡಿದ ನಿರ್ದೇಶನದಂತೆ ಕ್ರಮವಹಿಸುವ ಕುರಿತು.

ಉಲ್ಲೇಖ:
1. ಮಾನ್ಯ ಸರ್ವೋಚ್ಚ ನ್ಯಾಯಾಲದ w.p.(S)(Civil)109/2008 ದಿನಾಂಕ:28.02.2019
2. ಸರ್ಕಾರದ ಸುತ್ತೋಲೆ ಸಂಖ್ಯೆ: ಸಕಇ 73 ಪವಯೋ 2014 ಬೆಂಗಳೂರು ದಿನಾಂಕ:22.04.2019
3. ಸರ್ಕಾರದ ಕಾರ್ಯದರ್ಶಿಗಳು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ರವರ ಅರೆ ಸರ್ಕಾರಿ ಪತ್ರ ಸಂಖ್ಯೆ: STWD:ADMN/GEN/28/2024 ದಿನಾಂಕ:07.12.2024
4. ಸರ್ಕಾರದ ಕಾರ್ಯದರ್ಶಿಗಳು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ರವರ ಅರೆ ಸರ್ಕಾರಿ ಪತ್ರ ಸಂಖ್ಯೆ: STWD:ADMN/GEN/28/2024 ದಿನಾಂಕ:12.02.2025
5. ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಅಭಿಪ್ರಾಯ ದಿನಾಂಕ:20.02.2025

*<>*<>*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ 2006 (2007 ರ 2) ಮತ್ತು ನಿಯಮಗಳು-2007 (ನಿಯಮಗಳ ತಿದ್ದುಪಡಿ-2012) ರ ಅನುಷ್ಠಾನಕ್ಕೆ ಸಂಬಂಧಪಟ್ಟಂತೆ ಉಲ್ಲೇಖ(1) ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:28.02.2019 ರ ಆದೇಶದಂತೆ, ಉಲ್ಲೇಖ(2)ರ ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಿರುವಂತೆ ತಿರಸ್ಕರಿಸಿದ ಅರ್ಜಿಗಳನ್ನು ಪುನರ್ ಪರಿಶೀಲಿಸುವ ಕುರಿತು, ದಿನಾಂಕ: 28.11.2024 ರಂದು ನಡೆದ ರಾಜ್ಯಮಟ್ಟದ ಅನುಷ್ಠಾನ ಮೇಲ್ವಿಚಾರಣಾ ಸಮಿತಿ ಸಭೆಯಲ್ಲಿ ನೀಡಿದ ನಿರ್ದೇಶನವನ್ನು ಅನುಸರಿಸಿ ಉಲ್ಲೇಖ(3)ರ ಅರೆ ಸರ್ಕಾರಿ ಪತ್ರದಲ್ಲಿ 'ಬಾಕಿಯಿರುವ ಅರಣ್ಯಹಕ್ಕು ತಿರಸ್ಕೃತ ಅರ್ಜಿಗಳನ್ನು ವಿಲೇವಾರಿ ಮಾಡಲು ಪ್ರತಿ ವಾರಕ್ಕೊಮ್ಮೆ ಗ್ರಾಮಸಭೆ, ಪ್ರತಿ 15 ದಿನಕ್ಕೊಮ್ಮೆ ಉಪವಿಭಾಗ ಸಮಿತಿ ಹಾಗೂ ಜಿಲ್ಲಾಮಟ್ಟದ ಸಮಿತಿಯು ಕನಿಷ್ಠ ತಿಂಗಳಿಗೊಮ್ಮೆ ಸಭೆ ನಡೆಸಿ ಎರಡು ತಿಂಗಳೊಳಗಾಗಿ ಪೂರ್ಣಗೊಳಿಸಲು' ಕ್ರಮವಹಿಸುವಂತೆ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ.

ರಾಜ್ಯಮಟ್ಟದ ಅನುಷ್ಠಾನ ಮೇಲ್ವಿಚಾರಣಾ ಸಮಿತಿಯ ತೀರ್ಮಾನವನ್ನು ಪ್ರಶ್ನಿಸಿ ಸಂಘ-ಸಂಸ್ಥೆಗಳವರು ಸಲ್ಲಿಸಲಾದ ಆಕ್ಷೇಪಣೆಗಳ ಹಿನ್ನೆಲೆಯಲ್ಲಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಅಭಿಪ್ರಾಯದಂತೆ ಉಲ್ಲೇಖ(4)ರ ಅರೆ ಸರ್ಕಾರಿ ಪತ್ರದಲ್ಲಿ, 'ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿಗಳಲ್ಲಿ ಚುನಾಯಿತ ಸದಸ್ಯರ ಅನುಪಸ್ಥಿತಿಯಲ್ಲಿ ಅರ್ಜಿಗಳನ್ನು ಪುನರ್ ಪರಿಶೀಲಿಸುವುದರ ಕುರಿತು ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಶೀಲಿಸಿ, ಉಪವಿಭಾಗ ಮಟ್ಟದ ಅರಣ್ಯ ಹಕ್ಕು ಸಮಿತಿ(SDLC) ಹಾಗೂ ಜಿಲ್ಲಾ ಮಟ್ಟದ ಅರಣ್ಯ ಹಕ್ಕು ಸಮಿತಿಗಳಲ್ಲಿ(DLC) ಚುನಾಯಿತ ಸದಸ್ಯರ ಅನುಪಸ್ಥಿತಿಯಲ್ಲಿ ಅರಣ್ಯ ಹಕ್ಕು ತಿರಸ್ಕೃತ ಅರ್ಜಿಗಳನ್ನು ಪುನರ್ ಪರಿಶೀಲನೆ ಕಾರ್ಯವನ್ನು ಮುಂದಿನ ನಿರ್ದೇಶನದವರೆಗೆ ತಡೆಹಿಡಿಯುವಂತೆ' ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿರುತ್ತದೆ.

ಮುಂದುವರೆದು, ಮಾನ್ಯ ಸರ್ವೋಚ್ಚ ನ್ಯಾಯಾಲಯದ w.p.(S)(Civil)109/2008 ದಿನಾಂಕ:28.02.2019ರ ಆದೇಶದ ಪುಟ ಸಂಖ್ಯೆ 11 ರಲ್ಲಿ "also place on record the rejection orders and the details of the procedure followed for settlement of claims and what are the main ground on 12 which the claims have been rejected. It may also be stated that whether the Tribals were given opportunity to adduce evidence and, if yes, to what extent and whether reasoned orders have been passed regarding rejection of the claims" ಎಂದು ನಿರ್ದೇಶಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ ಪುನಃ ಕಾನೂನು ಅಭಿಪ್ರಾಯ ಪಡೆಯಲಾಗಿರುತ್ತದೆ. ಸದರಿ ಅಭಿಪ್ರಾಯದಲ್ಲಿ **"Sub-Divisional Committee could be constituted with the Chairman and other members who were available as per Rule 5(c) of the Scheduled Tribes and Other Traditional Forest Dwellers (recognition of Forest Rights) and progress undertaken till the filing of the Affidavit prior to the matter being taken up by the Hon'ble Supreme Court" ಎಂದು ತಿಳಿಸಿರುತ್ತಾರೆ.**

ಮೇಲ್ಕಂಡ ಅಂಶಗಳನ್ನು ಕೂಲಂಕುಶವಾಗಿ ಪರಿಶೀಲಿಸಿ, ಅರಣ್ಯ ಹಕ್ಕು ಸಮಿತಿಗಳು ತಿರಸ್ಕೃತ ಅರ್ಜಿಗಳನ್ನು ಪುನರ್ ಪರಿಶೀಲಿಸಲು ಈ ಕೆಳಕಂಡಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

1. ಗ್ರಾಮ ಅರಣ್ಯ ಹಕ್ಕು ಸಮಿತಿಗಳಲ್ಲಿ ಬಾಕಿ ಇರುವ ತಿರಸ್ಕೃತ ಅರ್ಜಿಗಳ ಪುನರ್ ಪರಿಶೀಲನೆ ಕಾರ್ಯವನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸುವುದು.

2. ಪ್ರಸ್ತುತ ಅಸ್ತಿತ್ವದಲ್ಲಿರುವ ಉಪವಿಭಾಗ ಮಟ್ಟದ ಅರಣ್ಯ ಹಕ್ಕು ಸಮಿತಿ (SDLC) ಹಾಗೂ ಜಿಲ್ಲಾ ಮಟ್ಟದ ಅರಣ್ಯ ಹಕ್ಕು ಸಮಿತಿಗಳಲ್ಲಿ (DLC) ಸಮಿತಿಗಳು ಅರ್ಜಿಗಳನ್ನು ತಿರಸ್ಕರಿಸುವ ಸಂದರ್ಭದಲ್ಲಿ ಪಾಲಿಸಬೇಕಾಗಿದ್ದ ವಿಧಿ-ವಿಧಾನಗಳನ್ನು ಅನುಸರಿಸಲಾಗಿದೆಯೇ?, ಅರ್ಜಿದಾರರಿಗೆ ಸಾಕ್ಷ್ಯಗಳನ್ನು ಒದಗಿಸಲು ಸಾಕಷ್ಟು ಕಾಲಾವಕಾಶ ನೀಡಲಾಗಿದೆಯೇ? ಮತ್ತು ಅರ್ಜಿಗಳನ್ನು ತಿರಸ್ಕರಿಸುವಾಗ ಸೂಕ್ತ ಕಾರಣಗಳನ್ನು ನಮೂದಿಸಿ Speaking Order ಗಳನ್ನು ಹೊರಡಿಸಲಾಗಿದೆಯೇ? ಎಂದು ಪರಿಶೀಲಿಸಿಕೊಳ್ಳುವುದು.

3. ಬಹುತೇಕ ಅರ್ಜಿಗಳನ್ನು ಸಾಕ್ಷ್ಯಗಳ ಕೊರತೆಯ ಕಾರಣವನ್ನು ನಮೂದಿಸಿ ತಿರಸ್ಕರಿಸಿರುವುದು ಕಂಡುಬಂದಿದ್ದು, ಅಂತಹ ಅರ್ಜಿಗಳನ್ನು ಪುನರ್ ಪರಿಶೀಲನೆ ಮಾಡುವಾಗ ಸಮಿತಿಗಳು ಅರಣ್ಯ ಹಕ್ಕು ಕಾಯ್ದೆ ನಿಯಮ 13 ರಲ್ಲಿನ ಕನಿಷ್ಟ 2 ಸಾಕ್ಷ್ಯಗಳು ಲಭ್ಯವಾಗದಿರುವ ಸಂದರ್ಭಗಳಿವೆಯೆ? ಎಂಬುದನ್ನು ಪರಿಶೀಲಿಸಿಕೊಳ್ಳುವುದು.

4. ಅರಣ್ಯ ಹಕ್ಕು ಕಾಯ್ದೆಯಡಿ, ಅರಣ್ಯ ಜಮೀನಿನ ಮೇಲೆ ಅವಲಂಬನೆ ಇಲ್ಲವೆಂದು ಕಾರಣ ನೀಡಿ ತಿರಸ್ಕೃತಗೊಂಡ ಪ್ರಕರಣಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ, ಈ ಹಿಂದೆ ಅರಣ್ಯ ಇಲಾಖೆಯಿಂದ ಕರ್ನಾಟಕ ಅರಣ್ಯ ಅಧಿನಿಯಮ-1963 ಹಾಗೂ ಅರಣ್ಯ ಸಂರಕ್ಷಣಾ ಕಾಯ್ದೆ-1980ರ ಅಡಿಯಲ್ಲಿ ನೋಟೀಸ್ ನೀಡಿ ತೆರವುಗೊಳಿಸಲಾದಂತಹ ಪ್ರಕರಣಗಳನ್ನು ಅರಣ್ಯ ಜಮೀನಿನ ಮೇಲಿನ ಅವಲಂಬನೆ ಸಾಧಿಸಲು (to Prove) ಪರಿಗಣಿಸಲಾಗಿದೆಯೆ? ಎಂಬುದನ್ನು ಪರಿಶೀಲಿಸಿಕೊಳ್ಳುವುದು.

5. ಸಮಿತಿಗಳು ತಿರಸ್ಕೃತಗೊಂಡ ಅರಣ್ಯ ಹಕ್ಕುಗಳ (Claims) ಪುನರ್ ಪರಿಶೀಲನೆ (Re-verification) ಮಾಡಿ ಪ್ರಕಾರಣವಾರು ಮಾಹಿತಿಯನ್ನು (Findings) ಸಿದ್ಧಪಡಿಸಿಕೊಳ್ಳುವುದು.

ಮೇಲ್ಕಂಡಂತೆ ಕೈಗೊಂಡ ಕ್ರಮಗಳ ವರದಿಯನ್ನು ಜಿಲ್ಲಾ ಮಟ್ಟದ ಅರಣ್ಯ ಹಕ್ಕು ಸಮಿತಿ (DLC)ಗಳ ಮೂಲಕ ಪ್ರತಿ ತಿಂಗಳು 5 ತಾರೀಖಿನೊಳಗಾಗಿ ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು, ಪರಿಶಿಷ್ಟ ಪಂಗಡದ ಕಲ್ಯಾಣ ಇಲಾಖೆ ರವರಿಗೆ ಕಳುಹಿಸುವುದು.

14.3.25

**(ರಂದೀಪ್ ಡಿ)**
ಸರ್ಕಾರದ ಕಾರ್ಯದರ್ಶಿ
ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ.

ಗೆ:

1. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಅರಣ್ಯ ಪಡೆ ಮುಖ್ಯಸ್ಥರು, ಅರಣ್ಯ ಭವನ, ಬೆಂಗಳೂರು.
3. ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಬೆಂಗಳೂರು.
4. ಎಲ್ಲಾ ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣಾಧಿಕಾರಿಗಳು.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ ಮಾಹಿತಿಗಾಗಿ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಕಾರ್ಯದರ್ಶಿ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು